ಇತಿಹಾಸದ ತಿರುವುಮುರುವು !

ಪರಕೀಯ ಸರಕಾರದ ಪ್ರಲಾಪ !

ಇತಿಹಾಸವೆಂದರೆ ಹಿಂದೆ ನಡೆದ ಘಟನೆಗಳ ಪರಿಚಯ. ಹಿಂದೆ ಹೀಗೆ ಆಯಿತು, ನಮ್ಮ ಪೂರ್ವಜರು ಈ ರೀತಿ ನಡೆದರು, ಎಂಬದನ್ನು ಮುಂದಿನ ಪೀಳಿಗೆಯವರು ಅರಿತುಕೊಂಡು ಆದರಿಂದ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಇತಿಹಾಸವು ಸಹಾಯಕವಾಗುವದು. ತಮ್ಮ ಪೂರ್ವಜರ ಬಗ್ಗೆ ಎಲ್ಲರಿಗೂ ಆದರ ಅಭಿಮಾನ ಗಳಿರುವದು ಸ್ವಾಭಾವಿಕ. ಅವರು ತಪ್ಪುಗಳನ್ನು ಮಾಡಿದ್ದರೆ ಆ ತಪ್ಪು ತಮ್ಮಿಂದ ಆಗದಂತೆ ಎಚ್ಚರಿಕೆ ವಹಿಸುವದೂ ಅವರು ಪರಾಕ್ರಮ ತ್ಯಾಗ, ಧೈರ್ಯ, ಸಾಹಸ ಗಳನ್ನು ತೋರಿಸಿ ಮಾನವ ಕುಲದ, ತನ್ನ ದೇಶದ, ತನ್ನ ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸಿದ್ದರೆ ಕೃತಜ್ಞತಾ ಬುದ್ಧಿಯಿಂದ ಅವನ್ನು ಸ್ಮರಿಸಿ ದಾರಿದೀಪ ಮಾಡಿಕೊಂಡು ಮುನ್ನಡೆಯುವದೂ ಇತಿಹಾಸದಿಂದಾಗುವ ಲಾಭ. ಇತಿಹಾಸ ಬರೆಯುವವರು ತಪ್ಪಾಗಿ ಬರೆದರೆ ಅಥವಾ ಅತಿಶಯೋಕ್ತಿಮಾಡಿ ಬರೆದರೆ ಅದೊಂದು ರಾಷ್ಟ್ರೀಯ ಪಾಪವೇ ಆಗುವದು. ಪರಕೀಯ ಸರಕಾರವು ತಾವು ಆಳುವ ದೇಶದ ಇತಿಹಾಸ ಬರೆಯಿಸುವಾಗ ಅವರ ದೃಷ್ಟಿಯು ಹೆಚ್ಚಾಗಿ ತಮ್ಮನ್ನು ಹೊಗಳಿಕೊಳ್ಳುದೂ ಅಂಕಿತ ಜನಾಂಗವನ್ನು ಹೀಯಾಳಿಸುವದೂ ಆಗಿರುತ್ತದೆ.

ಪರಕೀಯ ಬ್ರಿಟಿಶ ಸರಕಾರವು ಭಾರತದ ಇತಿಹಾಸವನ್ನು ಇದೇ ರೀತಿ ಬರೆಯಿಸಿತು. "ಶಿವಾಜಿಗೆ ಓದುಬರಹ ಬರುತ್ತಿದ್ದಿಲ್ಲ. ಅವನು ಪುಂಡನೂ ಸುಲಿಗೆಗಾರನೂ ಆಗಿದ್ದನು" ಎಂದು ನಾವು ಕಲಿಯುವಾಗ ಇತಿಹಾಸದಲ್ಲಿ ಓದಿದ್ದೇವೆ. ಇಂದು ಶಿವಾಜಿ ಮಹಾರಾಜರು ಸ್ವತಃ ಬರೆದ ಹಸ್ತಾಕ್ಷರದ ಪತ್ರಗಳು ದೊರತಿವೆ. ಶಿವಾಜಿ ಮಹಾರಾಜನು ಸ್ವರಾಜ್ಯ ಸ್ಥಾಪನೆಗಾಗಿಯೂ ಪರಕೀಯರ ದುರಾಕ್ರಮಣವನ್ನು ಯುಕ್ತಿಯಿಂದ ಪ್ರತಿ ಭಟಿಸುವದಕ್ಕಾಗಿಯೂ ಪ್ರಾಣ ಸಮರ್ಪಣೆಯ ಭಾವದಿಂದ ಹೋರಾಡಿರುವಾಗ ಇಂಥ ಮಹಾಪುರುಷನನ್ನು ಅಜ್ಞಾನಿಯೆಂದೂ ಪುಂಡಪೋಕರಿಯೆಂದೂ ಬರೆದು ಇತಿಹಾಸ ಪ್ರಸಿದ್ಧಿಸಿದರು.

ಕಲಕತ್ತೆಯ ಕತ್ತಲು ಕೋಣೆಯ ಇತಿಹಾಸವೂ ಇದೇ ರೀತಿಯದಾಗಿದೆ. ಹತ್ತಾರು ಜನರನ್ನುಸಹ ಹಿಡಿಸಲು ಸ್ಥಳವಿರದ ಆ ಕೋಣೆಯಲ್ಲಿ ನೂರೈವತ್ತು ಜನ ಬ್ರಿಟಿಶರನ್ನು ಬಂಗಾಲದ ನವಾಬ ಸುರಾಜ ಉದ್ದೌಲನು ತುಂಬಿ ಅವರು ಉಸಿರುಗಟ್ಟಿ ಸಾಯುವಂತೆ

ಮಾಡಿದನೆಂದು ಆ ಇತಿಹಾಸದಲ್ಲಿ ಬರೆದಿದ್ದಾರೆ. ಒಂದರ ಮೇಲೊಂದರಂತೆ ನೆಲದಿಂದ ಚಪ್ಪರದವರೆಗೆ ಚೀಲಗಳಂತೆ ಹೆಣಗಳನ್ನೊಟ್ಟಿದರೂ ಅಂಥ ಮೂರು–ನಾಲ್ಕು ಕೋಣೆ ಸಾಲದಿರುವಾಗ ಒಂದೇ ಕೋಣೆಯಲ್ಲಿ ಇಷ್ಟು ಜನರನ್ನು ತುಂಬುವದು ತೀರ ಅಶಕ್ಯ ವೆಂದು ಕ್ಷೇತ್ರಫಲ ಘನಫಲದ ಲೆಕ್ಕ ಮಾಡಿ ಪ್ರಸಿದ್ಧ ಇತಿಹಾಸ ಸಂಶೋಧಕರಾಗಿದ್ದ ದಿ. ಜದುನಾಥ ಸರಕಾರರು ಸಿದ್ಧಮಾಡಲಿಲ್ಲವೇ ?

ಟೀಪು ಸುಲ್ತಾನನು ಅತ್ಯಂತ ಹಿಂದೂ ದ್ವೇಷಿಯಾಗಿದ್ದನೆಂದು ನಾವೆಲ್ಲ ಇತಿಹಾಸ ಓದಿದ್ದೇವೆ. ಆದರೆ ವಸ್ತುಸ್ಥಿತಿ ಹಾಗಿದ್ದಿಲ್ಲವೆಂದು ಇತ್ತೀಚೆಗೆ ದೊರತ ಕಾಗದ ಪತ್ರ ಗಳಿಂದ ಸಿದ್ಧವಾಗಿದೆ. ಬ್ರಾಹ್ಮಣ ಜಾತಿಯವರಾದ ಪುಣೆಯ ಪೇಶವೆಯರ ಸೈನ್ಯ ಶೃಂಗೇರಿಯ ಶ್ರೀ. ಶಂಕರಾಚಾರ್ಯರ ಮಠ ಲೂಟಿ ಮಾಡಿದಾಗ ಪೇಶವೆಯವರಿಂದ ಯಾವ ಪರಿಹಾರವೂ ದೊರೆಯದ್ದರಿಂದ ಟೀಪು ಸುಲ್ತಾನನು ಮಠದ ಹಾನಿಯನ್ನು ತುಂಬಿಕೊಟ್ಟನಷ್ಟೇ ಅಲ್ಲ ಮಠಕ್ಕೆ ಏಷ್ಟೋ ಭೂಮಿಗಳನ್ನು ದತ್ತಿಯಾಗಿ ಕೊಟ್ಟನು. ಶ್ರೀರಂಗ ಪಟ್ಟಣದಲ್ಲಿ ೧೭೯೯ ರಲ್ಲಿ ನಡೆದ ಕೊನೆಯ ಮೈಸೂರ ಯುದ್ಧದ ಕಾಲಕ್ಕೆ ಬ್ರಿಟಿಶ ಸೈನ್ಯಗಳು ಪಟ್ಟಣವನ್ನು ಮುತ್ತಿದಾಗ ಟೀಪು ಸುಲ್ತಾನನು ಪಟ್ಟಣದ ಅಧಿದೇವತೆ ಯಾದ ಶ್ರೀರಂಗನಾಥನಿಗೆ ಸಹಸ್ರಾಭಿಷೇಕ ಮಾಡಿಸಿ ತನಗೆ ಜಯ ದೊರೆಯಲೆಂದು ಪ್ರಾರ್ಥಿಸಿದನು. ನಂಜನಗೂಡಿನ ಪ್ರಸಿದ್ಧ ದೇವಾಲಯದಲ್ಲಿ ಅನೇಕ ಶಿವಲಿಂಗ ಗಳಿದ್ದು ಅದರಲ್ಲಿಯ ಒಂದನ್ನು ಟೀಪು ಸುಲ್ತಾನನು ಸ್ಥಾಪಿಸಿದನೆಂದು ಇಂದಿಗೂ ಅಲ್ಲಿಯ ಪೂಜಾರಿಗಳು ಹೇಳುತ್ತಾರೆ.

ಶಿವಾಜಿ ಮಹಾಜನು ಪಟ್ಟಾಭಿಷೇಕ ಮಾಡಿಸಿಕೊಂಡದ್ದು ರಾಯಗಡದಲ್ಲಿ. ಆ ಗಡದ ತಳ ಪ್ರದೇಶದಲ್ಲಿ ಇದ್ದ ಒಂದು ಮಸೀದೆಯನ್ನು ಯಾರೋ ಕೆಡವಿ ಹಾಳು ಮಾಡಿದಾಗ ಶಿವಾಜಿ ಮಹಾರಾಜನು ಅದನ್ನು ಹೊಸವಾಗಿ ಕಟ್ಟಿಸಿಕೊಟ್ಟು ಅದರ ವ್ಯವಸ್ಥಗಾಗಿ ಹೊಸ ದತ್ತಿಯನ್ನೂ ಹಾಕಿಕೊಟ್ಟನು.

ಬ್ರಿಟಿಶರು ಚಳಿ ಪ್ರದೇಶದಿಂದ ಬಂದವರಾದ್ದರಿಂದ ಅವರು ಶೂರರಾಗಿದ್ದಾರೆ. ಭಾರತವು ಉಷ್ಣ ಪ್ರದೇಶವಾಗಿರುವದರಿಂದ ಇಲ್ಲಿಯ ಜನರು ಪುಕ್ಕರೂ ಆಲಸಿಗರೂ ಆಗಿರುತ್ತಾರೆಂದು ಇತಿಹಾಸದಲ್ಲಿ ಬರದದ್ದನ್ನು ನಾವು ಓದಿದ್ದೇವೆ.

ತಮ್ಮ ರಾಜ್ಯ ಆದಷ್ಟು ದಿನ ಹೆಚ್ಚು ಉಳಿಯುವದಕ್ಕಾಗಿ ತಮ್ಮನ್ನು ಹೂಗಳಿ ಕೊಳ್ಳುವ ಮನೋವೃತ್ತಿಯಿಂದ ಪರಕೀಯ ಸರಕಾರಗಳು ಶಾಲೆಯ ಅಭ್ಯಾಸ ಕ್ರಮದಲ್ಲಿ ಚಿಕ್ಕ ಮಕ್ಕಳ ತಲೆಯಲ್ಲ ಸರಕಾರದ ಬಗ್ಗೆ ಆದರ ಹುಟ್ಟಿಸುವದು ಹಾಗು ಸ್ವದೇಶದ ಬಗ್ಗೆ ತಾತ್ಸಾರ ಉಂಟಾಗುವಂಥ ಪಾಠಗಳನ್ನು ಬರೆಯಿಸುವದು ಅವರ ಉದ್ದೇಶವಾಗಿತ್ತು.

೧೯೧೯ ರಲ್ಲಿ ನಾನು ಕನ್ನಡ ೭ನೇ ಇಯತ್ತೆಯಲ್ಲಿ ಕಲಿಯುತ್ತಿದ್ದಾಗ ನಮ್ಮ ಶಿಕ್ಷಕರು "ಹಿಂದುಸ್ತಾನ ದೇಶ ಯಾರದು" ಎಂದು ನಕಾಶದ ಕಡೆಗೆ ಬೊಟ್ಟು ಮಾಡಿ

ಳುತ್ತಿದ್ದಾಗ "ಹಿಂದುಸ್ತಾನ ಬ್ರಿಟಿಶರದು" ಎಂದೇ ತಪ್ಪದೆ ಎಲ್ಲ ವಿದ್ಯಾರ್ಥಿಗಳು ಉತ್ತರ ಕೊಡುತ್ತಿದ್ದೆವು. ಹಿಂದುಸ್ತಾನ ನಮ್ಮದು ಎಂದು ನಮ್ಮ ಶಿಕ್ಷಕರು ಎಂದೂ ಕಲಿಸಲಿಲ್ಲ, ನಾವು ಕಲಿಯಲಿಲ್ಲ. ಇದು ಬ್ರಿಟಿಶರದು ಎಂದೇ ಅವರು ಕಲಸಿದ್ದರಿಂದ ವಿದ್ಯಾರ್ಥಿಗಳೆಲ್ಲ ಅದನ್ನೇ ಉತ್ತರಿಸುತ್ತಿದ್ದರು. ಹಿಂದುಸ್ತಾನವು ನಮ್ಮದು ಎಂದು ಸ್ವಾಭಿಮಾನದಿಂದ ಭಾರತೀಯರಿಗೆ ಕಲಿಸಿದ ಗುರುವು ಲೋಕಮಾನ್ಯ ಟಿಳಕರು. ಈ ರೀತಿ ಪರಕೀಯರು ಬರೆದ ನಮ್ಮ ಇತಿಹಾಸದಿಂದ ನಾವು ನಮ್ಮ ಸ್ವಾಭಿಮಾನ ಮಾರಿ ಕೊಂಡೆವು. ರಾಷ್ಟ್ರಾಭಿಮಾನಕ್ಕೆ ಎರವಾದೆವು.

ಸ್ವಕೀಯ ಸರಕಾರದ ಸತ್ಯಾಪಲಾಪ !

ಇದಾಯಿತು ಪರಕೀಯರ ಕಥೆ. ಸ್ವಾತಂತ್ರ್ಯ ಬಂದಮೇಲೆಯೂ ನಮ್ಮ ಸ್ವತಂತ್ರ ಸರಕಾರಗಳೂ ತಪ್ಪು ಇತಿಹಾಸ, ಸುಳ್ಳು ಇತಿಹಾಸ ಬರೆಯುತ್ತಿರುವದನ್ನು ನೋಡಿದರೆ ನಮ್ಮ ದುರ್ದಿನಗಳು ಇನ್ನೂ ತೀರಿಲ್ಲವೆಂದೇ ಹೇಳಬೇಕು. ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ನಡೆದದ್ದು ೧೯೦೫ನೇ ಇಸವಿಯಿಂದ. ೧೯೨೦, ೧೯೨೩, ೧೯೩೦, ೧೯೩೨, ೧೯೩೪, ೧೯೪೧ ಮತ್ತು ಕೊನೆಗೆ ೧೯೪೨ ಹೀಗೆ ವಿಳುಸಲ ಕಾಂಗ್ರೆಸ್ಸು ಹೋರಾಟ ನಡೆಯಿಸಿತು. ಆಗಾಗ ಕ್ರಾಂತಿಕಾರಕರೂ ಗುಪ್ತ ಸಂಘಟನೆಯಿಂದ ತಮ್ಮ ಪ್ರಾಣಾರ್ಪಣೆ ಮಾಡಿ ಜನತೆಯಲ್ಲಿ ದೇಶಭಕ್ತಿಯನ್ನೂ ವೀರ ಶ್ರೀಯನ್ನೂ ತುಂಬಿದರು. ೧೯೦೮ರ ಚಳವಳಿಯಿಂದ ೧೯೪೨ರ ಕೊನೆಯ ಚಳವಳಿಯ ವರೆಗಿನ 'ಪ್ರತಿಯೊಂದು' ಆಂದೋಲನದಲ್ಲಿ ಭಾಗವಹಿಸಿ ಹೋರಾಡಿದ ಕೆಲವರಾದರೂ ದೇಶಭಕ್ತರೂ ಸ್ವಾತಂತ್ರ್ಯ ವೀರರೂ ನಮ್ಮ ಸುದೈವದಿಂದ ಇಂದಿಗೂ ಜೀವಂತವಿದ್ದಾರೆ. ೧೯೨೦ ರಿಂದೀಚೆಯ ಎಲ್ಲ ಆಂದೋಲನಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದವರಂತೂ ಹಲವರು ಜೀವಂತ ಇದ್ದಾರೆ. ಇಂಥವರ ಒಂದು ಸಂಪಾದಕ ಮಂಡಲ ಮಾಡಿ ಅವರಿಂದ ಈ ಸ್ವಾತಂತ್ರ್ಯದ ಇತಿಹಾಸವನ್ನು ಬರೆಯಿಸಬೇಕೆಂಬ ವಿಚಾರ ಸರಕಾರಕ್ಕೆ ಬರಲಿಲ್ಲ. ಚುನಾವಣೆಗಳಲ್ಲಿ, ನವಕರಿಗಳಲ್ಲಿ, ಕಮಿಟಿಗಳಲ್ಲಿ ತಮ್ಮ ಕೋಮಿನವರಿಗೇ, ತಮ್ಮ ಸಂಬಂಧಿಕರಿಗೇ ಸ್ಥಾನ ಕೊಡುತ್ತಿರುವ ನಮ್ಮ ಮುಖಂಡರೂ, ಸರಕಾರ ನಡೆಸುವವರೂ ಈ ಇತಿಹಾಸ ಬರೆಯಿಸುವಾಗಲೂ ಅದೇ ದೃಷ್ಟಿಯಿಟ್ಟದ್ದು ಅತ್ಯಂತ ಖಂಡನೀಯ ಸಂಗತಿ

ನಮ್ಮ ಕರ್ನಾಟಕ ಸರಕಾರವು ಲಕ್ಷಾವಧಿ ರೂಪಾಯಿ ವೆಚ್ಚ ಮಾಡಿ ಬರೆಯಿಸಿದ "ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಹೋರಾಟದ ಇತಿಹಾಸ" (ಹಿಸ್ಟರಿ ಆಫ್ ಫ್ರೀಡಮ್ ಮುವ್ಹಮೆಂಟ ಇನ್ ಕರ್ನಾಟಿಕ) ಎಂಬ ಪ್ರಚಂಡ ಇಂಗ್ಲೀಷ ಗ್ರಂಥದ ಗತಿಯೂ ಹೇಗೇ ಆಗಿದೆ. ಅದರಲ್ಲಿ ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಹೋರಾಟದ ಕರ್ಣಧಾರರಾಗಿ ಕಾದಾಡಿದ ಸೇನಾನಿಗಳ ಬಗ್ಗೆ ಅಂತ್ಯತ ಲಘುವಾಗಿ ಬರೆದಿದ್ದು ಚಿಕ್ಕಪುಟ್ಟ ಘಟನೆಗಳಿಗೆ ಹಾಗು ಸ್ವಾತಂತ್ರ್ಯ ಸಂಗ್ರಾಮಕ್ಕೆ ಯಾವ ಸಂಬಂಧವೂ ಇಲ್ಲದ ವ್ಯಕ್ತಿಗೆ ಮತ್ತು ಸಂಬಂಧವಿದ್ದಂಥ ತಮಗೆ ಬೇಕಾದ ಕೆಲವೇ ವ್ಯಕ್ತಿಗಳಿಗೆ ಸಲ್ಲದ ಮಹತ್ವ ಕೊಟ್ಟು, ಹೇರಳ ಸ್ಥಳಾ

ವಕಾಶ ಕೊಟ್ಟು, ಬಹಳ ಬಣ್ಣಿಸಿ ಬರೆಯಲಾಗಿದೆ. ಇದರ ಬಗ್ಗೆ ಒಂದಷ್ಟೇ ಸಂಪುಟದ ಮುನ್ನುಡಿಯಲ್ಲಿ ತಾನು ಬರೆದದ್ದಾಗಿದೆ. ಈ ಪುಸ್ತಕದ ಮಸಿ ಆರಿದ ಕೆಲವೇ ವರ್ಷಗಳಲ್ಲಿ ನಮ್ಮ ಕರ್ನಾಟಕ ಸರಕಾರವು ಅದೇ ರೀತಿಯ ಇನ್ನೊಂದು ಪುಸ್ತಕವನ್ನು (ಅದನ್ನೂ ಇಂಗ್ಲೀಷದಲ್ಲಿ) ಬರೆಯಲು ಉದ್ಯುಕ್ತವಾಯಿತು. ೧೯೬೮ ರ ಜುಲೈ ತಿಂಗಳಲ್ಲಿ ಅದರ ಬಗ್ಗೆ ಸರಕಾರದಿಂದ ನನಗೊಂದು ರಜಿಸ್ಟರ ಪತ್ರ, ಅದರೊಂದಿಗೆ ಒಂದು ಫಾರ್ಸಲು ಬಂದಿತು. ಮೈಸೂರು ಸರಕಾರದ ಸಂಸ್ಕೃತಿ ವಿಭಾಗದ ವಿಶೇಷಾಧಿಕಾರಿ, ನಂ. ೨೯ ವಿಶ್ವನಾಥರಾವರೋಡ, ಮಾಧವನಗರ, ಬೆಂಗಳೂರು, ಇವರಿಂದ ಆ ಪತ್ರ ಬಂದಿದ್ದು ಅದರ ನಂಬರು ೧೦೬೪ / ಎಸ್. ಎಂಡ ಸಿ. ಡಿ. / ಹೂ ಈಜ ಹೂ / ೧೯೬೮--೬೯ ದಿನಾಂಕ ೨೯--೯--೧೯೬೮ / ೧೬--೭--೬೮ ಹೀಗೆ ಇದೆ. ಅದರಲ್ಲಿ ಕೆಳಗಿನಂತೆ ಬರೆಯಲಾಗಿದೆ.

ಶ್ರೀ. ಅಂಣೂಗುರೂಜಿಯವರಿಗೆ, ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಗಾರರು ,, ಯಾರು ಯಾರು " (ಹೂ ಈಜ ಹೂ) ಎಂಬ ಹೆಸರಿನ ಒಂದು ಚಿಕ್ಕ ಪುಸ್ತಕವನ್ನು ಬೇಗನೆ ಸರಕಾರವು ಪ್ರಕಟಿಸತಕ್ಕದ್ದಿದೆ. ನಮ್ಮ ಕಡೆಗೆ ಇದ್ದ ಬೆಳಗಾವಿ ಜಿಲ್ಲೆಯ ೨೦೫ ಸ್ವಾತಂತ್ರ್ಯಹೋರಾಟಗಾರರ ಹೆಸರುಗಳನ್ನೂ, ಅವರವರ ಹೆಸರು ಬರೆದ ಫಾರ್ಮುಗಳನ್ನೂ, ಇದರ ಜೊತೆಗೆ ಕಳಿಸಿದೆ, ಆ ಫಾರ್ಮಿನಲ್ಲಿ ಹೆಸರು, ಊರು, ಆದ ಶಿಕ್ಷೆ ದಂಡ, ಕಷ್ಟನಷ್ಟ, ಪೋಲೀಸರ ಗೋಳಿಬಾರದಲ್ಲಿ ಆದ ಗಾಯ, ಮುಂತಾದ ಬೇರೆ ಬೇರೆ ಕೋಷ್ಟಕಗಳಿವೆ. ಅವನ್ನು ವಿವರವಾಗಿ ತುಂಬಿ ಕೊಡಲು ಯಾರಿಗೆ ಎಲ್ಲಿ ಕಳಿಸಬೇಕು ತಿಳಿಯದಾಗಿದೆ. ತಾವು ಬೆಳಗಾವ ಜಿಲ್ಲೆಯ ಹಳೇ ಕಾರ್ಯಕರ್ತರಿದ್ದು ಪ್ರತಿಯೊಂದು ಹೋರಾಟದಲ್ಲಿ ಪ್ರತ್ಯಕ್ಷ ಭಾಗ ವಹಿಸಿರುವದರಿಂದ ತಮ್ಮ ಕಡೆಯಿಂದ ಎಲ್ಲ ಮಾಹಿತಿ ದೊರೆಯುವದೆಂದು ಕೆಲವು ಆದರಣೀಯ ಮುಖಂಡರು ಹೇಳಿದ್ದರಿಂದ ತಮಗೆ ಈ ಪತ್ರ ಬರೆಯಲಾಗಿದೆ. ಮತ್ತು ಜೊತೆಗೆ ೨೦೫ ಫಾರ್ಮುಗಳನ್ನೂ ಯಾದಿಯನ್ನೂ ಕಳಿಸಲಾಗಿದೆ. ದಯವಿಟ್ಟು ತೀವ್ರ ಎಲ್ಲರ ಬಗ್ಗೆ ಮಾಹಿತಿ ತುಂಬಿ ಕಳಿಸಬೇಕು.

ಈ ಪತ್ರ ಓದಿ ನನಗೆ ಆನಂದವಾಯಿತು. ಈ ಒಳ್ಳೇ ಕೆಲಸದಲ್ಲಿ ನನ್ನಿಂದಾದಷ್ಟು ಸಹಾಯ ಸಲ್ಲಿಸುವ ಇಚ್ಛೆಯಿಂದ ಆ ಹೋರಾಟಗಾರರ ಪಟ್ಟಿ ಓದಿದೆ. ಆ ೨೦೫ ಹೆಸರುಗಳಲ್ಲಿ ಕೇವಲ ೨೦ ಹೆಸರುಗಳು ಮಾತ್ರ ನನ್ನ ಪರಿಚಯದವಿದ್ದವು, ಅವುಗಳಲ್ಲಿ ಅನುಕ್ರಮ ನಂಬರು ೧೧೫, ೧೧೭, ೧೧೮, ೧೧೯, ೧೨೧, ೧೨೨ ಈ ಹೆಸರುಗಳನ್ನು ನೋಡಿ ಸ್ತಿಮಿತನಾದೆ ! ' ಇವರೆಂದು ಸ್ವಾತಂತ್ರ್ಯ ಹೋರಾಟಗಾರರಾದರು ? ' ಎಂದು ನನ್ನಷ್ಟಕ್ಕೆ ನಾನೇ ವಿಚಾರಿಸ ಹತ್ತಿದೆ,

ಅವರಲ್ಲಿ ಒಬ್ಬರಂತೂ ಸಾಯುವತನಕ ಬ್ರಿಟಿಶರ ಬಾಲ ಬಡೆದವರು. ಬಾಲ ಗಂಗಾಧರ ತಿಲಕರಿಗೆ ' ಬಾಳಪ್ಪ ಎಂಬ ಪುಣೆಯ ಹಾರುವ ' ಎಂದು ತಮ್ಮ ವಾರ ಪತ್ರಿಕೆಯಲ್ಲಿ ಬರೆದು ಹೀಯಾಳಿಸಿದ ಬೋಳಪ್ಪನವರು ಅವರು !

ಇನ್ನೊಬ್ಬರು ಕೊನೆಯವರೆಗೂ ಕ್ಯಾಂಗ್ರೆಸ ಸೇರದ ವಕೀಲರು. ಮೂರನೆಯವರು ಮಾಡಿ ಮಾಡಿ ಮುಗಿಸಿ ಕೊನೆಗೆ ಸೂಳಿ ಮುಪ್ಪಾಗಿ ಜೋಗುತಿ ಆದಂತೆ ಆಗತಿ ಕರಾದವರು.

೧೯೪೨ ರ ಅಂದೋಲನದಲ್ಲಿ ಪೋಲೀಸರಿಗೆ ಕೈಮುಗಿದು ಅವರ ಕೃಪೆಯಿಂದ ಕಡೆತನಕ ಹೂರಗೆ ಉಳಿದು ನಮ್ಮ ಸ್ವಯಂ ಸೇವಕರಿಗೆ ಕುಡಿಯಲು ನೀರು ಸಹ ಕೂಡ ದಂಥ ಪುಕ್ಕರು ನಾಲ್ಕನೆಯವರು. ೧೯೪೨ ರ ಕ್ರಾಂತಿಯ ಆರಂಭದಲ್ಲಿ ಜನಸಾಗರವು ಕಚೇರಿಯನ್ನು ಮುತ್ತಿದಾಗ ಮಾಮಲೇದಾರರ ಜೊತೆಗೆ ನಿಂತು ಕಾಂಗ್ರೆಸ್ಸಿಗರಿಗೆ ಬುದ್ಧಿ ಹೇಳಿವರು ಐದನೆಯವರು.

೧೯೪೨ ರಲ್ಲಿ ಬಹುಶ: ಇನ್ನೂ ಹುಟ್ಟಿರದಂಥ ಇನ್ನೊಂದು ವ್ಯಕ್ತಿ ಆರೆನೆಯವರು !

ಹೀಗೆ ಹೆಸರುಗಳನ್ನು ಓದಿದ ಮೇಲೆ ನನಗೆ ಆದ ಸಂತಾಪ ಅಷ್ಟಿಷ್ಟಲ್ಲ. ಕಿಡಿ ಕಿಡಿಯಾದೆ. ಇವರೇ ನಮ್ಮ ಸ್ವಾತಂತ್ರ್ಯ ಹೋರಾಟಗಾರರೋ ? ಇತಿಹಾಸದಲ್ಲಿ ಇವರ ಹೆಸರು ಬರುವದಾದರೆ ಇದೆಂಥ ಇತಿಹಾಸವಾದೀತು ! ಎಂದು ದುಃಖಿಸಿ ಈ ಸಂಗತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಬರೆದು ತಿಳಿಸಿ, ನಾನು ಈ ವಿಷಯದಲ್ಲಿ ಏನೂ ಮಾಡಲಾರೆ, ದಯವಿಟ್ಟು ಈ ಪಟ್ಟಿಯೊಳಗಿನ ನನ್ನ ಹೆಸರನ್ನಷ್ಟು ತೆಗೆದು ಬಿಡಿರಿ, ಎಂದು ಉತ್ತರ ಬರೆದೆ. ಜೊತೆಗೆ ಶ್ರೀ. ಶ್ರೀರಂಗ ಕಾಮತ, ಜಯದೇವ ಕುಲಕರ್ಣಿಯವರ ಹೆಸರೂ ಹಾಕಬೇಡಿರೆಂದು ಸೂಚಿಸಿದೆ. ಕೈಯಲ್ಲಿದ್ದ ಅಧಿಕಾರದ ದುರುಪಯೋಗ ಮಾಡಿಕೊಂಡು ಸ್ವಜನಪಕ್ಷಪಾತ ಸ್ವಜಾತಿಪಕ್ಷಪಾತ, ಸ್ವಾರ್ಥಸಾಧನೆ, ಮಾಡುವ ಭ್ರಷ್ಟಾಚಾರ ಈಗ ಎಲ್ಲ ಕಡೆಗೆ ಅತಿಯಾಗಿ ಬೆಳೆಯು ಹತ್ತಿದ್ದನ್ನು ಎಲ್ಲರೂ ನೋಡುತ್ತಿದ್ದೇವೆ. ಆದರೆ ಸುಳ್ಳು ಇತಿಹಾಸ ಬರೆಯುವದು ಬರೆಯಿಸುವದು ಮಹಾ ಭ್ರಷ್ಟಾಚಾರವಲ್ಲವೇ ? ಎಲ್ಲ ಅಂದೋಲನಗಳಲ್ಲಿ ಪ್ರತ್ಯಕ್ಷ ಭಾಗವಹಿಸಿದ ಹಲವಾರು ಜನರು ಜೀವಂತವಿರುವಾಗ ಈ ರೀತಿ ಸುಳ್ಳು ಇತಿಹಾಸ ಬರೆಯುವ ಧೈರ್ಯ ಸರಕಾರ ಮಾಡಬಾರದಾಗಿತ್ತು. ಇಂದಿನ ಪೀಳಿಗೆಯ ಜನರೇ ಈ ಅಸತ್ಯವನ್ನು ಪ್ರತಿಭಟಿಸದಿದ್ದರೆ ಮುಂದಿನವರು ಅದನ್ನು ವೇದವಾಕ್ಯವೆಂದು ನಂಬಬಹುದು. ಹೀಗಾಗಿ ಹಿಂದಿನ ಎಲ್ಲ ಇತಿಹಾಸವನ್ನೂ ನಂಬದಂಥ ಪರಿಸ್ಥಿತಿ ಬಂದೀತು. ಈಗ ನಾವು ಓದುವ ಹಿಂದಿನ ಇತಿಹಾಸವನ್ನು ಆಗಿನ ಕಾಲದ ರಾಜ ಮಹಾರಾಜರು ತಮಗೆ ಅನುಕೂಲವಾಗುವಂತೆ ಬರೆಯಿಸಿರಬಹುದೇ ? ಎಂಬ ಸಂಶಯ ಬಾರದಿರದು. ಪ್ರಜಾಪ್ರಭುತ್ವದ ಈ ದಿನಗಳಲ್ಲಿ ಅನ್ಯಾಯವನ್ನು, ರಾಷ್ಟ್ರೀಯತೆಗೆ ಕಲಂಕ ತರುವ ಅನ್ಯಾಯವನ್ನು, ಎಲ್ಲರೂ ಚನ್ನಾಗಿ ತಿಳಿದುಕೊಂಡು ಪ್ರತಿಭಟಿಸಲೇಬೇಕು. ತಪ್ಪಾಗಿ ಬರೆದ ಇತಿಹಾಸ ತಿದ್ದಲು ಹಚ್ಚಬೇಕು. ಸ್ವಾತಂತ್ರ್ಯ ಯೋಧರೆಂದು ಪೆನಶನ್ ಪಡೆಯುತ್ತಿರುವ ವೀರರಾದರೂ ಪ್ರತಿಭಟಿಸಬೇಕು.

ನಮ್ಮ ತೇಜ ನಷ್ಟವಾಗಹತ್ತಿದೆ !

ಇದೇ ಸಂದರ್ಭದಲ್ಲಿ ಪೆನಶನ್‌ದಾರರ ಬಗ್ಗೆಯೂ ಒಂದೆರಡು ಮಾತು ಬರೆಯದಿರಲಾರೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಿಗೆ ಅವರ ಆರ್ಥಿಕ ಸ್ಥಿತಿ ಚೆನ್ನಾಗಿ ಇರದಿದ್ದರೆ ಮಾಸಿಕ ವಿಶ್ರಾಂತಿ ವೇತನ (ಪೆನಶನ್) ಕೊಡುವ ಯೋಜನೆಯನ್ನು ಸರಕಾರವು ಪ್ರಾರಂಭಿಸಿದೆ. ಇದು ಯೋಗ್ಯವೋ ಹೇಗೆ ಎಂಬುದರ ವಿಚಾರ ಮಾಡುವದೂ ಅವಶ್ಯವಿದೆ. ಮೊದಲಿಗೆ ಸ್ವಾತಂತ್ರ್ಯ ಯೋಧರು ಯಾರು ಎಂಬುದರ ವ್ಯಾಖ್ಯೆಯನ್ನು ಸರಕಾರವು ಸರಿಯಾಗಿ ಮಾಡಬೇಕಾಗಿತ್ತು. ಅದನ್ನು ಮಾಡಲಿಲ್ಲ, ೬ ತಿಂಗಳು ೩ ತಿಂಗಳು ಜೇಲಿಗೆ ಹೋಗಿ ಬಂದವರೆಲ್ಲ ಸ್ವಾತಂತ್ರ್ಯ ಯೋಧರೆಂದು ಭಾವಿಸಿದ್ದು ಅನೇಕ ಅನಾಹುತಗಳಿಗೆ ಕಾರಣವಾಗಿದೆ. ಅದರಲ್ಲಿಯೂ ಸ್ಥಾನಬದ್ಧರ ಪ್ರಶ್ನೆ ತೀರ ತೊಡಕಿನದಾಗಿದೆ. ಜೇಲಿಗೆ ಹೋದ ಬಗ್ಗೆ ಜೇಲ ಅಧಿಕಾರಿಗಳ ಹತ್ತರ ಕಾಗದ ಪತ್ರದ ದಾಖಲೆಯಿಲ್ಲದಾಗ (ಅಫಿಡೆವಿಟ್ ಮ್ಯಾಜಿಸ್ಟ್ರೇಟರ ಮುಂದೆ ಪ್ರತಿಜ್ಞಾ ಹೇಳಿಕೆ) ಕೊಟ್ಟರೆ ಸಾಕು ಎಂದು ಸರಕಾರ ತಿಳಿಸಿದ್ದರಿಂದ ಈ ಪ್ರಶ್ನೆ ಮತ್ತಿಷ್ಟು ಹದ ಗೆಟ್ಟು ಹೋಗಿದೆ. ಜೇಲಿಗೆ ಹೋಗದಿದ್ದರೂ ಹೋಗಿದ್ದೇವೆಂದು ಹೇಳಿ ಸುಳ್ಳು ಅಫಿಡೆವಿಟ್ ಮಾಡಿ ರಾಜಕೀಯ ಪೆನಶನ್ ಪಡೆಯುತ್ತಿರುವ ಅನೇಕ ಉದಾಹರಣೆಗಳಿವೆ. ಇವರೊಂದಿಗೆ ನಿಜವಾಗಿ ಜೇಲಿಗೆ ಹೋದವರು ಅದೇ ಸಾಲಿನಲ್ಲಿ ನಿಂತು ಪೆನಶನ್ ಪಡೆಯುವದನ್ನು ನೋಡಿ ಮನಸ್ಸಿಗೆ ಹೇಗೋ ಅನಿಸುತ್ತಿದೆ.

ವಿರಾಮ ವೇತನಕ್ಕೆ ಅರ್ಹರಾರು ?

೧೯೪೨ ರ ಕೊನೆಯ ಅಂದೋಲನವೊಂದನ್ನು ಬಿಟ್ಟರೆ ಉಳಿದ ಯಾವ ಅಂದೋಲನದಲ್ಲಿಯೂ ಪೋಲೀಸರು ಅನ್ಯಾಯವಾಗಿ ಯಾರನ್ನೂ ಬಂಧಿಸಿ ಜೇಲಿಗೆ ಕಳಿಸಲಿಲ್ಲ. ಹೇಳಿ ಕೇಳಿ ಥಾಣಾ ಡಂಗುರ ಹೊಡೆದು ದೇಶಭಕ್ತಿಯಿಂದ ಪ್ರೇರಿತರಾಗಿ ಕಾಯದೆಭಂಗ ಮಾಡಿದವರನ್ನೇ ಪೋಲೀಸರು ಜೇಲಿಗೆ ಕಳಿಸಿದರು. ಆದರೆ ೧೯೪೨ ರಲ್ಲಿ ಚಳವಳಿಗೆ ಸಂಬಂಧವಿರಲಿ ಬಿಡಲಿ ಅದರ ವಿಚಾರ ಮಾಡದೆ ತಮ್ಮ ಮನಸ್ಸಿಗೆ ಬಂದವರನ್ನು ಬಂಧಿಸುವ ಅಧಿಕಾರ ಪೋಲೀಸರಿಗೆ ಇದ್ದುದರಿಂದ ಖಾಸಗಿ ದ್ವೇಷದಿಂದ, ದುಡ್ಡು ಸೆಳೆಯುವ ಕುಬುದ್ಧಿಯಿಂದ ಮತ್ತೂ ಏನೇನೋ ಕಾರಣದಿಂದ ಚಳವಳಿಗೆ ಸಂಬಂಧವಿರದ ಸಾವಿರಾರು ಜನರನ್ನು ಪೋಲೀಸರು ಬಂಧಿಸಿದರು. ಇವರೆಲ್ಲರಿಗೂ ಪೆನಶನ್ ದೊರೆಯುವದು ಸರಿಯೇ ಎಂಬದು ವಿಚಾರ ಮಾಡತಕ್ಕ ಸಂಗತಿಯಾಗಿದೆ.

ಇನ್ನೊಂದು ಮಹತ್ವದ ವಿಷಯವೆಂದರೆ, ಪೆನಶನ್ ಈ ಶಬ್ದದ ಅರ್ಥವೇನು ? ಪೆನಶನ್ ಅಥವಾ ನಿವೃತ್ತಿ ವೇತನ ಕೊಡುವದು ಹಿಂದೆ ಇಂತಿಷ್ಟು ವರುಷ ಸತತ ಸೇವೆ ಮಾಡಿದ್ದಕ್ಕಾಗಿ ಅದು ೨೫, ೨೦, ೧೫ ವರುಷ ಹೀಗೆ ಇರಬಹುದು. ಸೇವೆಯ ಸಾತತ್ಯ ವಿರುವದು, ಕನಿಷ್ಟ ಇಂತಿಷ್ಟು ವರುಷ ಸೇವೆ ಮಾಡುವದು, ನಿವೃತ್ತಿ ವೇತನಕ್ಕೆ ಮೂಲ

ಆಧಾರವಾಗಿದೆ. ೬ ತಿಂಗಳು ಅಥವಾ ೩ ತಿಂಗಳು ಸೇವೆ ಮಾಡಿದ ಯಾವ ನೌಕರನಿಗೆ ಅಥವಾ ಸೈನಿಕನಿಗೆ ಯಾವ ದೇಶದಲ್ಲಿ ಪೆನ್‌ಶನ್ ಸಿಗುತ್ತಿದೆ ? ಕನಿಷ್ಟ ಸೇವೆಯ ಕಾಲ ೨೫ ವರುಷ ಇರಲೇಬೇಕೆಂಬ ನಿಯಮವು ಸರಕಾರಿ ನೌಕರರಿಗೆ ಅನ್ವಯಿಸುವಂತೆ ದೇಶಸೇವಕರಿಗೂ ಯಾಕೆ ಅನ್ವಯಿಸಬಾರದು ? ಇದೂ ಸೇವಾನಿವೃತ್ತಿ ಅದೂ ಸೇವಾ ನಿವೃತ್ತಿ. ಇದರಲ್ಲಿ ಭೇದ ಮಾಡುವ ಕಾರಣವಿದ್ದಿಲ್ಲ. ಹಾಗಾಗಿದ್ದರೆ ಖಂಡಿತವಾಗಿಯೂ ಅದಕ್ಕೊಂದು ಗೌರವ ಬರುತ್ತಿತ್ತು. ಕೆಲವು ಖಾತೆಗಳಲ್ಲಿ ನಿವೃತ್ತಿಗೆ ೧೨ ವರುಷ ಸೇವೆಯೂ (ವಿಮಾನ, ಇಂಜನ ಡ್ರಾಯವಿಂಗ ಮುಂತಾದದ್ದಲ್ಲಿ) ಸಾಕೆಂದು ತಿಳಿಯಲಾಗುತ್ತಿದೆ. ದೇಶಸೇವೆಯ ವಿಷಯದಲ್ಲಿ ೧೦ ವರುಷಗಳ ಕಾಲವನ್ನಾದರೂ ಸಾತತ್ಯವೆಂದು ತಿಳಿಯಬೇಕಾಗಿತ್ತು, ೧೦ ವರುಷ ಜೇಲವಾಸವೆಂದು ನನ್ನ ಅಭಿಪ್ರಾಯವಲ್ಲ. ೧೦ ವರುಷದ ದೇಶಸೇವೆ ಎಂದು ಸಾಮಾನ್ಯ ಅರ್ಥ. ಅವನು ಅಷ್ಟು ಅವಧಿಯಲ್ಲಿ ನಡೆದ ಹೋರಾಟದಲ್ಲಿ ಜೇಲಿಗೆ ಹೋಗಿದ್ದರೆ ಸಾಕು ಎಂಬರ್ಥ. ಸುದೈವದಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಹೋರಾಟವಿಲ್ಲದೆ ಐದು ವರುಷಗಳೂ ಹಾಗೆಯೇ ಎಂದೂ ಹೋಗಿಲ್ಲ. ೧೯೦೮ ರ ಕ್ರಾಂತಿಕಾರಕರಂತೂ ಈಗ ಯಾರೂ ಉಳಿದಿಲ್ಲ. ಅದನ್ನು ಬಿಟ್ಟರೆ ೧೯೨೦, ೧೯೨೩, ೧೯೩೦, ೧೯೩೨, ೧೯೩೪, ೧೯೪೧, ೧೯೪೨ ಹೀಗೆ ಏಳು ಹೋರಾಟಗಳು ಒಟ್ಟಿಗ ನಡೆದಿವೆ. ಇದರಲ್ಲಿಯು ಯಾವದೇ ಎರಡು ಹೋರಾಟಗಳಲ್ಲಿಯಾದರೂ ಭಾಗವಹಿಸಿದವರನ್ನು ಸ್ವಾತಂತ್ರ್ಯ ಯೋಧರೆಂದು ಕರೆದು ಅವರಿಗೆ ಇದಕ್ಕೂ ಹೆಚ್ಚು ಗೌರವಧನ ಅಥವಾ ಪೆನಶನ್ ಕೊಟ್ಟಿದ್ದರೆ ಅದು ಯಾವದೇ ಭ್ರಷ್ಟಾಚಾರಕ್ಕೆ ಆಸ್ಪದಕೊಡದೆ ಯೋಗರಿದ್ದವರಿಗಷ್ಟೇ ಮರ್ಯಾದೆ ಸಲ್ಲಿಸಿದಂತಾಗುತ್ತಿತ್ತು.

ಹಿಂದಿನ ಹೋರಾಟಗಾರರ ಕರುಣ ಕಥೆ !

೧೯೨೮ ರಲ್ಲಿ ಹುತಾತ್ಮ ಭಗತಸಿಂಗರ ಜೊತೆಗೆ ದಿಲ್ಲಿಯ ಪಾರ್ಲಿಮೆಂಟ ಭವನದಲ್ಲಿ ಬಾಂಬು ಚೆಲ್ಲಿದ ಬುಟಕೇಶ್ವರ ದತ್ತರಿಗೆ ೨೦ ವರುಷದ ಕಠಿಣ ಕಾರಾಗ್ರಹ ವಾಸದ ಶಿಕ್ಷೆಯಾಗಿತ್ತು. ಅವರ ಆರೋಗ್ಯ ತೀರ ಕೆಟ್ಟಿದ್ದರಿಂದ ಬ್ರಿಟಿಶ ಸರಕಾರವು ಸುಮಾರು ೧೨ ವರುಷಗಳ ನಂತರ ಜೇಲಿನಿಂದ ಅವರನ್ನು ಬಿಡುಗಡೆ ಮಾಡಿತು. ಸ್ವಾತಂತ್ರ್ಯ ಸಿಕ್ಕ ಮೇಲೆ ೨೦ ವರುಷಾದರೂ ಅವರು ಜೀವಿಸಿರಬಹುದು. ಈ ಅವಧಿಯಲ್ಲಿ ಅವರ ಜೀವನ ಹೇಗೆ ನಡದಿತ್ತೆಂಬಡಕ ಕಡೆಗೆ ನಮ್ಮ ಸ್ವತಂತ್ರ ಭಾರತದ ಸರಕಾರದ ಲಕ್ಷ ಹೋಗಲಿಲ್ಲ. ಬ್ರೆಡ್ ಮಾರಿ, ರಿಕ್ಷಾ ಹೊಡೆದು, ತನ್ನ ತುತ್ತಿನ ಚೀಲವನ್ನು ಆ ಮಹಾನ್ ದೇಶಭಕ್ತನು ತುಂಬುತ್ತಿದ್ದ. ಅವನು ಸಾಯುವವರೆಗೂ ನಮ್ಮ ಸರಕಾರ ಅತ್ತ ನೋಡಲಿಲ್ಲ. ಸ್ವಾತಂತ್ರ್ಯವೀರ ವಿನಾಯಕರಾವ ಸಾವರಕರರಿಗೆ ೫೦ ವರ್ಷ ಡಬಲ್ ಕಾಳಾಪಾಣಿ ಶಿಕ್ಷೆಯಾದಾಗ ಅದೇ ಮದುವೆಯಾಗಿದ್ದ ಅವರ ಪತ್ನಿಯನ್ನು ಅವರ ಮಾವಂದಿರು ಮಗಳಿಗೆ ಯಾವ ಆಧಾರವೂ ಇಲ್ಲದ್ದರಿಂದ ತಮ್ಮ ಮನೆಗೆ ಕರೆದು

ಕೊಂಡು ಹೋದರು. ಕ್ರಾಂತಿಕಾರಕನ ಹೆಂಡತಿಗೆ ಆಶ್ರಯ ಕೊಟ್ಟ ಆರೋಪದಿಂದ ಅವರ ಹೊಲ, ಮನೆ ಸರಕಾರಜಮಾ (ಫಾರಫೀಟು) ಆಗಿ ಹೋದವು! ಬ್ರಿಟಿಶ ಸರಕಾರವು ಫಾರಫೀಟ ಮಾಡಿದ ಆ ಹೊಲ, ಮನೆ ಸ್ವಾತಂತ್ರ್ಯ ಸಿಕ್ಕು ಇಷ್ಟವರುಷಗಳಾದರೂ ತಿರುಗಿ ದೊರೆಯಲಿಲ್ಲ. ವೀರ ಸಾವರಕರರು ಅಂದಮಾನ ಜೇಲಿನಲ್ಲಿದ್ದಾಗ ಅಷ್ಟರಿಗೆ ಹಾವಿನ ತುಣುಕುಗಳು ಇದ್ದ ಪಲ್ಲೆ ತಿನ್ನಬೇಕಾಯಿತು! ಅವರನ್ನು ದನದಂತೆ ಎಣ್ಣೆಯ ಗಾಣಕ್ಕೆ ಎಳೆಯಲು ಹಚ್ಚಿದಾಗ ವಾರ್ಡರನಿಂದ ಬೆನ್ನಮೇಲೆ ಬಾರಕೋಲಿನಿಂದ ಹೊಡೆಯಿಸಿಕೊಳ್ಳಬೇಕಾಯಿತು! ಅವರ ಅಣ್ಣನಿಗೆ ೨೦ ವರ್ಷ, ತಮ್ಮನಿಗೆ ೫ ವರ್ಷ ಶಿಕ್ಷೆಯಾಗಿತ್ತು. ಅಂಣನ ಹೆಂಡತಿ ಅನ್ನಾನ್ನಗತಿಕಳಾಗಿ ಆಶ್ರಯವಿಲ್ಲದೆ ಅಲೆದಾಡುವಾಗ ಅವಳಿಗೆ ಭಿಕ್ಷೆ ಸಹ ಹಾಕಕೂಡದೆಂದು ಬ್ರಿಟಿಶ ಸರಕಾರವು ಕಟ್ಟಪ್ಪಣೆ ಮಾಡಿದ್ದರಿಂದ ಹೊಟ್ಟಿಗಿಲ್ಲದೆ ಹಾಳು ಮನೆಯ ಹಿತ್ತಲದಲ್ಲಿ ಅವಳು ತಬ್ಬಲಿಯಾಗಿ ಪ್ರಾಣ ಬಿಟ್ಟಳು!

ಇದು ಗರೀಬಿ ಹಟಾವ ಯೋಜನೆಯೇ?

ಇಂಥ ಅನೇಕ ಉದಾಹರಣೆಗಳಿರುವಾಗ ಕೇವಲ ೩ ತಿಂಗಳ ಮಾತ್ರ ಜೇಲಿಗೆ ಹೋಗಿ ಹತ್ತೆಂಟು ಪೌಂಡ ತೂಕ ಹೆಚ್ಚಿಸಿಕೊಂಡು ಹೊರಗೆ ಬಂದು ಪುನಃ ಚಳುವಳಿಯ ಗೋಜಿಗೆ ಸಹ ಹೋಗದವರಿಗೆ, ಹಾಗು ಅಂಥವರ ಹೆಂಡಂದಿರಿಗೆ, ರಾಜ್ಯ ಸರಕಾರವು ತಿಂಗಳಿಗೆ ೭೫ ರೂ. ಯಂತೆಯೂ, ಕೇಂದ್ರ ಸರಕಾರವು ತಿಂಗಳಿಗೆ ಅನುಕ್ರಮವಾಗಿ ೨೦೦ ರೂ. ೧೦೦ ರೂ. ಯಂತೆಯೂ ಪೆನ್‌ಶನ್ ಕೊಡುತ್ತಿದೆ ಅಂದಿನ ಆ ಚಿತ್ರ ಇಂದಿನ ಈ ಚಿತ್ರ ನೋಡಿದರೆ ನಾನನ್ನುವದರ ಅರ್ಥವಾದೀತು. ಜೇಲಿಗೆ ಹೋದವರ ಮಾತಂತೂ ಇರಲಿ, ಹೋಗದಿದ್ದವರೂ ಸಹ ಪೆನ್‌ಶನ್ ಪಡೆಯುತ್ತಿದ್ದುದ್ದನ್ನು ಕಂಡು ಬೇರೆ ಅರ್ಥದಿಂದ "ಕಾಲಾಯ ತಸ್ಮೈ ನಮಃ" ಎನ್ನಬೇಕಾಗುತ್ತದೆ. ದುಡ್ಡು ಯಾರಿಗೆ ಬೇಡ? ಎಲ್ಲರಿಗೂ ಬೇಕು. ಸಂಸತ್ತಿನ ಹಾಗು ಶಾಸನ ಸಭೆಗಳ ಸದಸ್ಯರ ಸಂಬಳ ವರ್ಷಾನುವರ್ಷ ಹೆಚ್ಚುತ್ತ ಹೋಗಬೇಕು, ಅವರ ದಿನಭತ್ಯೆಯಂತೂ ಬೆಳಯಲೇ ಬೇಕು. ನಿವೃತ್ತ ನವಕರರ ಪೆನ್‌ಶನ್ ಹೆಚ್ಚಾಗಬೇಕು, ನವಕರಿಯಲ್ಲಿದ್ದವರ ಸಂಬಳ ಭತ್ಯೆ ಬೆಳೆಯಬೇಕು. ಏಕತ್ರ ಕುಟುಂಬ ಪದ್ಧತಿಯು ಹಾಳಾಗುವಂತೆ ಮಾಡಿ ಮುದಕರಿಗೆ ಕೊಡುತ್ತಿದ್ದ ಮೂವತ್ತು ರೂಪಾಯಿ ಪೆನ್‌ಶನ್ನೂ ಹೆಚ್ಚು ಮಾಡಬೇಕು. ಎಲ್ಲರಿಗೂ ಪೆನ್‌ಶನ್ ಸಿಗಬೇಕು. ಗರೀಬಿ ಹಟಾವ ಆಗಬೇಕು! ದುಡಿಯುವದೂ ಬೇಡ ದುಃಖ ಪಡುವದೂ ಬೇಡ! ಅಗ್ಗದ ಲೋಕಪ್ರಿಯತೆಯೂ ಪೊಳ್ಳು ಘೋಷಣೆಯೂ ಇಂದಿನ ಯುಗಧರ್ಮವಾಗಿರುವಾಗ ಅಪ್ರಿಯವಾದ ಕಟು ಸತ್ಯ ಹೇಳುವದು ಸಾಹಸದ ಮಾತಾಗಿದೆ! ತಾನಿರುವವರೆಗೆ ತನ್ನ ಕೈಯಲ್ಲಿ ಅಧಿಕಾರ ಹೇಗೆ ಉಳದೀತೆಂಬುದರ ಹಂಬಿಕೆಯೇ ಹರಂಬಿಕೆ. ದೇಶ ಉಳದೀತೋ ಅಳಿದೀತೋ ನೋಡುವವರಾರು! 'ಆಪ ಮುವೆ ಪೀಛೆ ಡುಬಗಯಿ ದುನಿಯಾ' ಎಂಬುದೇ ಇಂದಿನ ರಾಜಕಾರಣದ ಮಾರ್ಗದರ್ಶಕ ಸೂತ್ರವಾದಂತೆ ಕಾಣುತ್ತದೆ.

ಹೀಗೆ ಸಹಾಯ ಮಾಡಬಹುದಾಗಿತ್ತು.

ದೇಶ ಭಕ್ತರ ಗೌರವವಾಗಬೇಕು. ಹೋರಾಟಗಾರರಿಗೆ ಪುರಸ್ಕಾರ ದೊರೆಯ ಬೇಕು. ಆದರೆ ಹಿಟ್ಟು–ಬೂದಿ ಸಮ ಆಗಬಾರದೆಂಬ ವಿಚಾರದಿಂದ ನಾಲ್ಕು ಮಾತು ಬರೆಯಬೇಕಾಗಿದೆ. ದೇಶ ಸೇವೆಯ, ತ್ಯಾಗದ, ಮಾರಾಟವಾಗಬಾರದಾಗಿತ್ತು. ಪ್ರಪ್ರಥಮವಾಗಿ ಆಜನ್ಮ ಕಾರಾಗೃಹದ ಕಷ್ಟ ಸಹಿಸಿದವರಿಗೆ, ಅವರು ಜೀವಂತವಿರದಿದ್ದರೆ ಅವರ ಮೆನೆಯವರಿಗೆ, ಹುತಾತ್ಮರಾದವರ ಮನೆಯವರಿಗೆ, ನಂತರ ೫ ವರುಷದ ಶಿಕ್ಷೆ ಭೋಗಿಸಿದವರಿಗೆ, ಮೂರನೆಯದಾಗಿ ಯಾವದೇ ಎರಡು ಚಳವಳಿಗಳಲ್ಲಿ ಶಿಕ್ಷೆ ಭೋಗಿಸಿದವರಿಗೆ; ಅದೂ ಅವರ ಆರ್ಥಿಕ ಸ್ಥಿತಿಯನ್ನು ವಿಚಾರಿಸಿ, ಯೋಗ್ಯ ಸಹಾಯ ಸಲ್ಲಿಸಬಹುದಾಗಿತ್ತು. ಅವರಿಗೆ, ಅಥವಾ ಅವರು ಜೀವಂತವಿರದಿದ್ದರೆ ಅವರ ಮನೆಯ ವರಿಗೆ, ಅವರು ಭಿಕಾರಿಗಳಂತೆ ಅರ್ಜಿ ಮಾಡದೆ ಸರಕಾರವೇ ಅವರ ಮನೆಮುಟ್ಟಿ ಹೋಗಿ ಈ ಗೌರವ ತೋರಿಸಬಹುದಾಗಿತ್ತು ಉದ್ಯೋಗ ಮಾಡಲು ಬಡ್ಡಿ ಇಲ್ಲದೆ ಸಾಕಷ್ಟು ಹಣ ಸಾಲಕೊಟ್ಟು ಚಿಕ್ಕ ಚಿಕ್ಕ ೨೦ ಕಂತುಗಳಿಂದ ಅದನ್ನು ತಿರುಗಿ ಮುಟ್ಟಿಸಿ ಕೊಳ್ಳುವ ಯೋಜನೆ, ಜಡ್ತಿ–ಜಾಪತ್ರಯಗಳಿಂದ ಬಳಲುತ್ತಿದ್ದರೆ ಅವರ ಉಪ ಚಾರದ ಎಲ್ಲ ಹೊಣೆ ಸರಕಾರವೇ ಹೊತ್ತುಕೊಳ್ಳುವ ಯೋಜನೆ, ಅವರ ಮಕ್ಕಳ ಶಿಕ್ಷಣದ ಎಲ್ಲ ಭಾರವಹಿಸುವ ಯೋಜನೆ, ಮಾಡಬಹುದಾಗಿತ್ತು. ಸರಕಾರಿ ನವಕರಿ ಗಳಲ್ಲಿ, ಭೂಮಿ ವಿತರಣೆಯಲ್ಲಿ, ಟೆನನ್ಸಿಕಾಯದೆಯಲ್ಲಿ, ಸವಲತ್ತು ತೋರಿಸುವದು ಮುಂತಾದ್ದರಲ್ಲಿ ಇಂಥವರಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ಅವರನ್ನು ಗೌರವಿಸಬಹುದಾ ಗಿತ್ತು. ಈ ರೀತಿಯ ವಿಚಾರ ಪೂರ್ವಕ ಯೋಜನೆ ಮಾಡಬಹುದಾಗಿತ್ತು. ಅದರಲ್ಲಿ ಗೌರವವಿತ್ತು, ಆದರವಿತ್ತು, ಮರ್ಯಾದೆಯಿತ್ತು. ಅದನ್ನು ಬಿಟ್ಟು ಅಗ್ಗದ ಲೋಕ ಪ್ರಿಯತೆಗಾಗಿ ಏನನ್ನೋ ಮಾಡಿ ದೇಶಭಕ್ತರ ದೇಶಭಕ್ತಿಯ ಅಪಹಾಸ್ಯ ಮಾಡಿದಂತಾ ಗಿದೆ. ನಾಮಮಾತ್ರ ಜೇಲಿಗೆ ಹೋದವರಿಗೂ ಹೋಗದೆ ಇದ್ದು ಸುಳ್ಳು ಅಫಿಡೆವಿಟ್ ಮಾಡಿದವರಿಗೂ ಸರಸಹಾ ಜನಜಾತ್ರೆಯಂತೆ ರಾಜಕೀಯ ಪೆನಶನ್ ಸಿಗಹತ್ತಿದರೆ ಇವರೆಲ್ಲರೂ ದೇಶಭಕ್ತರೆಂದೂ ಸ್ವಾತಂತ್ರ್ಯ ಹೋರಾಟಗಾರರೆಂದೂ ಸರಕಾರದ ಮುದ್ರೆ ಬಿದ್ದು ಇತಿಹಾಸಕ್ಕೆ ಅಪಚಾರ ಮಾಡಿದಂತೆ ಆಗದಿರದು.

ನಾವೆಲ್ಲರೂ ಸ್ವಾತಂತ್ರ್ಯ ವೀರರೇ ?

ಈಗ ಜಿಲ್ಲೆಯಲ್ಲಿ ಸುಮಾರು ಮೂರುವರೆ ಸಾವಿರ ಜನರ ರಾಜಕೀಯ ಪೆನಶನ್ ಪಡೆಯುತ್ತಿರಬಹುದು. ೧೫ನೇ ಆಗಸ್ಟದ ಸ್ವಾತಂತ್ರ್ಯದ ಹುಟ್ಟು ಹಬ್ಬವಾಗಲಿ, ೨೬ನೇ ಜಾನೇವರಿಯ ಪ್ರಜಾರಾಜ್ಯ ದಿನವಾಗಲಿ, ಗಾಂಧೀ ಜಯಂತಿಯಾಗಲಿ, ಟಿಳಕ ಪುಣ್ಯ ತಿಥಿಯಾಗಲಿ, ಇವರಲ್ಲಿಯ ಎಷ್ಟು ಜನರಿಗೆ ನೆನಪಿದೆ? ವರುಷದಲ್ಲಿ ಈ ನಾಲ್ಕು ದಿನಗಳನ್ನಾದರೂ ನೆನಪಿಡುವದು ನಮ್ಮೀ ಪೆನಶನ್‌ದಾರರ ಕರ್ತವ್ಯವಲ್ಲವೇ ? ನಾಲ್ಕು ದಿನ ಹೋಗಲಿ, ಕೊನೆಗೆ ೧೫ನೇ ಆಗಸ್ಟ, ೨೬ನೇ ಜಾನೇವಾರಿ ಈ ಎರಡು ದಿನಗಳಾದರೂ

ಪೆನಶನ್ ಪಡೆಯುತ್ತಿರುವವರು ತಮ್ಮ ತಮ್ಮ ಮನೆಗಳ ಮೇಲೆ ರಾಷ್ಟ್ರಧ್ವಜ ಏರಿಸು ತ್ತಾರೆಯೇ ? ನೂರಕ್ಕೆ ೫ ರಷ್ಟಾದರೂ ಪೆನಶನ್ ಪಡೆಯುವ ಹೋರಾಟಗಾರರು ತಮ್ಮ ತಮ್ಮ ಮನೆಗಳ ಮೇಲೆ ವರುಷದಲ್ಲಿ ಕೇವಲ ಎರಡು ಸಾರೆ ಆದರೂ ರಾಷ್ಟ್ರಧ್ವಜ ಏರಿಸದಿದ್ದರೆ ಅವರು ಸ್ವಾತಂತ್ರ್ಯವೀರರೇ ಹೋರಾಟಿಗಾರರೇ ಹೇಗೆ ಎಂಬುದನ್ನು ನಾವು ಆತ್ಮನಿರೀಕ್ಷಣೆ ಮಾಡಿಕೊಳ್ಳಬೇಕು. ಪೆನಶನ್ ಪ್ರಕರಣ ತಯಾರಿಸುವಾಗ ಅದೆಷ್ಟು ಜನ ಗ್ರಾನೂಧಿಕಾರಿಗಳಿಗೆ ತಾಲೂಕ, ಜಿಲ್ಲಾ ಕಚೇರಿಯ ಕಾರಕೂನರಿಗೆ ಹಾಗೂ ಖೊಟ್ಟಿ ಅಫಿಡೆವಿಟ್ ಮಾಡುವ ಉದ್ಯೋಗವನ್ನೇ ಹಿಡಿದ ವಿಜಂಟರಿಗೆ ಲುಚ ಕೊಟ್ಟಿಲ್ಲವೆಂಬದನ್ನು ತಮ್ಮಷ್ಟಕ್ಕೆ ತಾವೇ ವಿಚಾರಿಸಬೇಕು. ಪೆನಶನ್‌ದಿಂದ ಪ್ರತಿ ತಿಂಗಳು ಬರುವ ಪವಿತ್ರ ಹಣವನ್ನು ಸೆರೆ ಕುಡಿಯಲಿಕ್ಕೆ ಜೂಜು ಆಡಲಿಕ್ಕೆ ವಾರದ ಬಡ್ಡಿಯಂತೆ ಸಾಲಕೊಡಲಿಕ್ಕೆ ವಿಲಾಸಿ ಜೀವನಕ್ಕೆ ಉಪಯೋಗ ಮಾಡುತ್ತಿರುವ ಉದಾಹರಣೆಗಳೂ ಇವೆಯೇ ಎಂಬದರ ವಿಚಾರವನ್ನು ನಾವೂ ಸರಕಾರವೂ ಕೂಡಿಯೇ ಮಾಡಬೇಡವೇ ? ಜೇಲಿನ ಸರ್ಟಿಫಿಕೇಟಿನ ಜೊತೆಗೆ ವರುಷನಲ್ಲಿ ೧೫ ನೇ ಆಗಸ್ಟ ಮತ್ತು ೨೬ ನೇ ಜಾನೇವಾರಿ ಈ ಎರಡು ದಿನಗಳಾದರೂ ಕಳೆದ ಹತ್ತು ವರುಷ ನಿಯ ಮಿತವಾಗಿ ತಮ್ಮ ಮನೆಯ ಮೇಲೆ ರಾಷ್ಟ್ರಧ್ವಜ ಹಾರಿಸುತ್ತ ಬಂದವರಿಗೆ ಪೆನ್‌ಶನ್ ಕೊಟ್ಟಿದ್ದರೂ ಅಡ್ಡಿಯಿದ್ದಿಲ್ಲ, ಅದರಲ್ಲಿಯೂ ಗೌರವವಿತ್ತು. ಒಂದು ಪಾಠ ಕಲಿಸಿ ದಂತಾಗುತ್ತಿತ್ತು. ಮುಂದಿನ ಪೀಳಿಗೆಗೆ ದೇಶಭಕ್ತಿಯ ಆಕರ್ಷಣೆಯಾಗುವಂತೆ ವಿಚಾರಪೂರ್ವಕ ಯೋಜನೆ ಈಗಲಾದರೂ ಆಗಬೇಕು. ಪೆನಶನ್ ಪಡೆಯುತ್ತಿರುವವರ ಜೀವನ ನೋಡಿ ಮುಂದಿನ ಪೀಳಿಗೆಯ ಜನರಿಗೆ ಸ್ವಾತ್ರೀಯತೆಯ ಅರಿವಾಗುವ ಬದಲು ಇವರೇ ದೇಶಭಕ್ತರೋ ? ಎಂದು ಹೀಯಾಳಿಸಿಕೊಳ್ಳುವ ಸ್ಥಿತಿ ಖಂಡಿತವಾಗಿ ಇತ ಬಾರದು, ಬರಬಾರದು.

ಇತಿಹಾಸವು ಸರಿಯಾಗಿ ಬರಯಲ್ಪಡಬೇಕು. ಸುಳ್ಳು ಸಂಗತಿ ಅದರಲ್ಲಿ ಬರ ಬಾರದು, ಅತಿಶಯೋಕ್ತಿ ಆಗಬಾರದು, ಅನ್ಯೋಕ್ತಿಯೂ ಆಗಬಾರದು, ತಪ್ಪು ಕಲ್ಪನೆ ಉಂಟಾಗುವಂತೆಯೂ ಆಗಬಾರದು ಎಂಬ ಉದ್ದೇಶದಿಂದ ಕೆಲವು ಕಟುಮಾತುಗಳನ್ನು ಬರೆಯಬೇಕಾಯಿತು. ನಿಜವಾದ ದೇಶಭಕ್ತರಿಗೆ, ಸ್ವಾತಂತ್ರ್ಯ ಹೋರಾಟಗಾರರಿಗೆ, ಯೋಗ್ಯ ಮರ್ಯಾದೆ ಸಿಗಬೇಕೆಂಬುದೇ ಈ ವಿವರಣೆಯ ಉದ್ದೇಶವಲ್ಲದೆ ಬೇರೆ ಏನೂ ಅಲ್ಲವಾದುದರಿಂದ ದಯವಿಟ್ಟು ಯಾರೂ ಅನ್ಯಥಾ ಭಾವಿಸುವಾರದು.

ಚಿರಂತನ ಮೂಲ್ಯಕ್ಕಾಗಿ ಹೆಣಗೋಣ !

ಕರ್ನಾಟಕದಲ್ಲಿ ನಡೆದ ಎಲ್ಲ ಚಳುವಳಿಗಳಲ್ಲಿ ಬೆಳಗಾವಿ ಜಿಲ್ಲೆಯು ಯಾವಾಗಲೂ ಪ್ರಥಮ ಸ್ಥಾನದಲ್ಲಿದೆ. ಇಡೀ ಕರ್ನಾಟಕದಲ್ಲಿ ಜೇಲಿಗೆ ಹೋದವರಲ್ಲಿ ಅರ್ಧದಷ್ಟು ಹೋರಾಟಗಾರರು ಈ ಜಿಲ್ಲೆಯವರೇ. ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಹೋರಾಟದ ಆದ್ಯಪ್ರವರ್ತಕರಾದ ಕರ್ನಾಟಕಸಿಂಹ ಗಂಗಾಧರರಾವ ದೇಶಪಾಂಡೆ ಹಾಗು ಕ್ರಾಂತಿ

ವೀರ ಗೋವಿಂದರಾವ ಯಾಳಗಿ ಇವರೀರ್ವರೂ ಬೆಳಗಾವಿಯವರೆ. ಕರ್ನಾಟಕದಲ್ಲಿಯ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ ಬರೆಯಬೇಕಾದರೆ ಆ ಇತಿಹಾಸ ಪುಸ್ತಕದಲ್ಲಿಯ ಅರ್ಧ ಭಾಗವು ಬೆಳಗಾಂವಿ ಜಿಲ್ಲೆಗೆ ಮೀಸಲಾಗಿಡಬೇಕು. ಅಷ್ಟು ಕಾರ್ಯ, ಅಷ್ಟು ಪ್ರಖರ ಹೋರಾಟ ಈ ಜಿಲ್ಲೆಯಲ್ಲಿ ನಡೆಯಿತು. ಇಂಥ ಗೌರವಯುತ ಸ್ಥಾನದಲ್ಲಿದ್ದ ಬೆಳಗಾವಿ ಜಿಲ್ಲೆಯ ಮಾನಮರ್ಯಾದೆ ಕಡಿಮೆ ಆಗುವ ರೀತಿಯಲ್ಲಿ ನಮ್ಮ ಜಿಲ್ಲೆಯ ಸ್ವಾತಂತ್ರ್ಯೋಧರು ನಡೆದುಕೊಳ್ಳಬಾರದೆಂಬ ಹೆಬ್ಬಯಕೆ ನನ್ನದಾಗಿದೆ. ಆ ಉದ್ದೇಶವಿಟ್ಟುಕೊಂಡೇ ನಾನು ಈ ಇತಿಹಾಸವನ್ನು ಬರೆಯಲುದ್ಯುಕ್ತನಾದೆ. ಈ ಇತಿಹಾಸವನ್ನು ಓದಿ ಆದರೂ ನಮ್ಮ ಸರಕಾರದವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿಯ ನಮ್ಮ ಜಿಲ್ಲೆಯ ಸ್ಥಾನಮಾನದ ಅರಿವು ಆದೀತೆಂದು ಆಶಿಸಿದ್ದೇನೆ.

ನಮ್ಮ ಜಿಲ್ಲೆಯ ಹೋರಾಟಗಾರರಾದರೂ ಕ್ಷಣಭಂಗುರ ಮಾತಿಗೆ ಮರುಳಾಗದೆ ಚಿರಂತನ ಮೂಲ್ಯಗಳಿಗಾಗಿ ಹೋರಾಡಲು ಹಿಂಜರಿಯದಿರಲಿ. ತಾಮ್ರಪತ್ರವು ಅದನ್ನು ಪಡೆದವರ ಮನೆಯಲ್ಲಿ ಉಳಿಯಬಹುದು. ಆದರೆ ಸರಕಾರವು ಬರೆದ ಸುಳ್ಳು ಇತಿಹಾಸವು ಮಾತ್ರ ಎಲ್ಲರ ಕೈಯಲ್ಲಿ ಹೋಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಧ ವಿಲ್ಲದವರೇ ದೇಶಕ್ಕೆ ಸ್ವಾತಂತ್ರ್ಯ ತಂದರೆಂಬ ಭಾವನೆ ದೃಢಮೂಲ ಆದೀತೆಂಬುದನ್ನು ನಾವು ಮರೆಯಬಾರದು. ತಾಮ್ರಪತ್ರ ಸಿಕ್ಕವರಲ್ಲಿ ಪ್ರತಿಯೊಬ್ಬನೂ ನಿಜವಾದ ಸ್ವಾತಂತ್ರ್ಯ ಹೋರಾಟಗಾರನಿದ್ದನೆಂದೂ ನಾವು ನಂಬಬಾರದು. ತಂತ ಕತ್ತರಿಸಿ ಮಾರಿಕೊಳ್ಳುತ್ತಿದ್ದ ಕಳ್ಳರು ಸಹ ದಿ॥ ೨ ಆಗಷ್ಟ ೧೯೭೩ ರಂದು ತಾಮ್ರಪತ್ರ ದಯಪಾಲಿಸಿದವರ ಪಟ್ಟಿಯಲ್ಲಿದ್ದುದು ನಾವು ಕಂಡಿದ್ದೇವೆ. ಇನ್ನೂ ಇಂಥ ಎಷ್ಟು ಜನರಿಗೆ ತಾಮ್ರಪತ್ರ ಕೊಡಲಾಗುವದೋ ದೇವರೆ ಬಲ್ಲ.

ಬೆಳಗಾಂವಿ ಜಿಲ್ಲೆಯ ಸ್ವಾತಂತ್ರ್ಯ ಸಮರದ ಇತಿಹಾಸ ಬರೆಯುವಾಗ ಸ್ವಾತಂತ್ರ್ಯ ದೊರೆತನಂತರ ನಮ್ಮ ದೇಶದ ಸ್ಥಿತಿಗತಿ ಏನಾಗಿದೆ, ಅದನ್ನು ಸುಧಾರಿಸುವ ಉಪಾಯ ಗಳಾವವು ಎಂಬುದನ್ನು ನಾನು ಅನುಷಂಗಿಕವಾಗಿ ಬರೆದಿದ್ದೇನೆ. ಓದುಗರು ಅದರ ಬಗ್ಗೆ ತೀವ್ರಾಲೋಚನೆ ಮಾಡಬೇಕು ಮತ್ತು ಕಾಲ ಮಿಂಚುವ ಪೂರ್ವದಲ್ಲಿಯೇ ಇಂದಿನ ತರುಣರು ಅದರ ಬಗ್ಗೆ ಕಾರ್ಯಪ್ರವೃತ್ತರಾಗಬೇಕು. ಸ್ವಾತಂತ್ರ್ಯಕ್ಕಾಗಿ ದುಡಿದವರು ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡಬೇಕು. ಅಂದರೇನೆ ನಮ್ಮ ದೇಶದ ಭವಿತವ್ಯ ಬದಲಾಗಬಹುದು, ಬೆಳಗಬಹುದು.